ಹಾಡುತ್ತಿದ್ದವಳಿಗೆ ಗಂಡನಾಗುವವನಲ್ಲಿ ಪುಸ್ತಕಗಳು ಇರಬಹುದು, ತಾನು ಓದಬಹುದು, ಇನ್ನೂ ಬರೆಯಬಹುದು ಎನ್ನುವ ಪುಟ್ಟ ಆಸೆಯಷ್ಟೇ ಇದ್ದುದು; ಅದಕ್ಕಿಂತ ಹೆಚ್ಚಿನ ಕನಸು ಕಾಣುವ ಧೈರ್ಯವನ್ನು ತಾಯಿಮನೆಯ ಪರಿಸ್ಥಿತಿ ತುಂಬಿರಲಿಲ್ಲ. ಸಿಡುಕ ಅಪ್ಪನ ದುಡುಕುತನ ನೋಡಿ ನೋಡಿ ಬೇಸತ್ತಿದ್ದವಳಿಗೆ ಗಂಡನಾಗುವವ, 'ಮೇಷ್ಟ್ರಲ್ಲವೇ! ಮಕ್ಕಳ ಜೊತೆ ಬೆರೆಯುವವ, ಹೊಸತನ್ನು ಕಲಿಸುವವ, ಸಹಜವಾಗಿ ಒಳ್ಳೆಯ ಯೋಚನೆ ಇರುತ್ತದೆ' ಎನ್ನುವ ನಿರೀಕ್ಷೆ ಮುಂದಿನ ಜೀವನದ ಬಗ್ಗೆ ಹುರುಪು ಹುಟ್ಟಿಸಿತ್ತು.

ಮದುವೆ ಕಳೆದು ಮಂಜಾಡಿಯ ಮನೆ ಸೇರುವಾಗ ಅತ್ತೆ ಮಾವ ಇದ್ದ ಮನೆಯಲ್ಲಿ ಗಂಡನ ಸರಿಯಾದ ಪರಿಚಯವಾಗಲು ತಿಂಗಳೇ ಕಳೆದಿತ್ತು. ಪೇಟೆಗೆ ಹತ್ತಿರದ ಮನೆ, ಸುತ್ತ ಪುಟ್ಟ ತೋಟ, ಸಂಬಳ ತರುವ ಕೆಲಸ ಇವುಗಳ ನಡುವೆ ಆಸಕ್ತಿ ಹುಟ್ಟಿಸಿದ್ದು ಗಂಡನ ಪುಸ್ತಕಗಳ ಮರದ ಕಪಾಟು. ಸಂಜೆ ನಾಲ್ಕುವರೆಗೆಲ್ಲ ಅತ್ತೆ ಮಾವನಿಗೂ ಕಾಫಿ ಕೊಟ್ಟು ಒಂದಾದರೂ ಪುಸ್ತಕ ತೆರೆದು ನೋಡಬೇಕು ಎಂದು ಕೈ ಹಾಕಿದ್ದಷ್ಟೇ... ಅತ್ತೆಯ ದನಿ ಕೇಳಿಸಿತು. 'ನೋಡು, ತನ್ನ ಪುಸ್ತಕದ ಕಪಾಟನ್ನು ಯಾರೂ ಮುಟ್ಟಬಾರದು ಅಂತಿದೆ ಅವನಿಗೆ, ಯಾವ ಪುಸ್ತಕವೂ ಆಚೆ ಈಚೆ ಆಗಿರಬಾರದು, ಜಾಗ್ರತೆ' ಎಂದಾಗ ತಾನೂ ಮುಟ್ಟಬಾರದೆ ಎನಿಸಿತ್ತು. ಕೈಗೆ ಮೊದಲು ಸಿಕ್ಕಿದ ಪುಸ್ತಕ, 'ಗೋಕುಲ ನಿರ್ಗಮನ'. ಓಹ್, ಪುಟ ತಿರುಗಿಸಿದರೆ, 'ಅಕೋ ಶ್ಯಾಮ ಅವಳೇ ರಾಧೆ... ನಲಿಯುತಿಹರು ಕಾಣಿರೇ...' ಕೊನೆಯ ಚರಣ, 'ನೋಡಿ, ತಣಿಯೇ ಹಾಡಿ ತಣಿಯೆ...' ಮೈಮರೆತು ಓದುತ್ತಿದ್ದರೆ, 'ನನ್ನ ಪುಸ್ತಕಗಳನ್ನು ಮುಟ್ಟಬಾರದು ಅಂತ ಅಮ್ಮ ಹೇಳಿದ್ದಲ್ಲ ನಿಂಗೆ, ಈ ಅಧಿಕಪ್ರಸಂಗ ಎಲ್ಲ ಅಪ್ಪನ ಮನೆಲೇ ಬಿಟ್ಟು ಬರಬೇಕಿತ್ತು'. ಹಿಂದೆ ನೋಡಿದರೆ ದತ್ತಾತ್ರೇಯ ಮುಖದಲ್ಲಿ ಅಸಹನೆ ತುಂಬಿಕೊಂಡು ನಿಂತಿದ್ದ. ಅವಮಾನವಾದರೂ ಸಾವರಿಸಿಕೊಂಡು, 'ನಂಗಿಷ್ಟ... ಓದೋದು. ಹಾಡು ಬರೀತಿನಿ ನಾನೂ...' ಸಂಕೋಚದಿಂದ ಹೇಳುತ್ತಿದ್ದರೆ, 'ಆ ಹುಚ್ಚೆಲ್ಲ ಬಿಡಬೇಕು. ಮಾಡೊದಕ್ಕೆ ಬೇಕಾದಷ್ಟು ಮನೆ ಕೆಲಸಗಳು ಇರ್ತವೆ. ಯಾರನ್ನೊ ನೋಡಿಕೊಂಡು ಇಂಥವನ್ನೆಲ್ಲ ಮಾಡಬೇಕಿಲ್ಲ' ಕೋರ್ಟ್ ತೀರ್ಪಿನಂತಹ ಮಾತು. ದತ್ತು ಮೇಷ್ಟ್ರ ಮನೆಯಲ್ಲಿ ಮತ್ತೆ ಅದರ ಬಗ್ಗೆ ಚರ್ಚೆಗಳಿಲ್ಲ. 'ಇಂಥ ಕ್ಷುಲ್ಲಕ ವಿಚಾರಗಳಿಗೆಲ್ಲ ಮಾತಾಡಲು ಸಮಯವೇ ಇಲ್ಲ' ಬಾಣ ಬಿಟ್ಟಂತೆ ಏನೊ ಕೆಲಸ ಮಾಡಿಕೊಂಡು ಮಾತು ಬರುತ್ತಿತ್ತೇ ಹೊರತು, ಹೆಂಡತಿಯ ಮುಖ ನೋಡಿ ಮಾತಾಡುವ ವ್ಯವಧಾನವೇ ಅವರಿಗೆ ಇರುತ್ತಿರಲಿಲ್ಲ. ಅತ್ತೆ ಮಾವನ ಕೆಲಸಗಳು, ಬರುವವರು ಹೋಗುವವರ ಸುಧಾರಿಕೆಯಲ್ಲಿ ಪೂರ್ತಿ ಮಾತುಗಳನ್ನಾಡುವ ಅವಕಾಶ ಸಿಗಲೇ ಇಲ್ಲ!

ಮಂಜಾಡಿಯಂಥ ಸಣ್ಣ ಊರಿನಲ್ಲಿ ದತ್ತು ಮೇಷ್ಟ್ರ ದೊಡ್ಡ ಬಳಗಕ್ಕೆ ಸತ್ಯಭಾಮಾ, ದತ್ತು ಮೇಷ್ಟ್ರ ಮನೆಯವ್ರು, ಅಷ್ಟೇ. ಹೊರಗಿನವರೊಂದಿಗೆ ಮೇಷ್ಟ್ರ ನಡೆನುಡಿ ಎಲ್ಲವೂ ಅಪ್ಪಟ ಚಿನ್ನ. ಬೆಣ್ಣೆಯಂತೆ! ನಸುನಗೆಯೊಂದಿಗೆ ಅವರು ಮಾತಾಡುವ, ತಮಾಷೆ ಮಾಡುವಾಗಿನ ಮುಖ ಏನಾದರು ಸತ್ಯಭಾಮಾ ನೋಡಿದರೆ ತಲೆತಿರುಗಿ ಬೀಳಬೇಕು, 'ಇವ ನನ್ನ ಗಂಡನೇಯಾ' ಅಂತ. ಅಷ್ಟಾಗಿಯೂ ಸತ್ಯಗೆ ಇದೆಲ್ಲ ಅಸಹಜ ಅನ್ನಿಸಿರಲಿಲ್ಲ. ಅವಳ ಅಪ್ಪನ ಅಭ್ಯಾಸವೂ ಸ್ವಲ್ಪ ಹೀಗೆ ಇತ್ತು. ಇಡೀ ದಿನ ಮೆಣಸು ತಿಂದವರಂತೆ ಧುಮುಗುಟ್ಟುತ್ತಾ ಇರುವವ ಸಂಜೆಯ ಭಜನೆಗಾಗುವ ಹೊತ್ತಿಗೆ ಏಕಾಏಕಿ ನಾಮದೇವ ತುಕಾರಾಮರ ಅಪರಾವತಾರವೊ ಎನ್ನುವಂತೆ 'ತುಝು ಸಗುಣ ಮ್ಹಣೊಕಿ ನಿರ್ಗುಣರೆ' ಎಂದು ಹಾಡುವಾಗಿನ ಮನುಷ್ಯನೇ ಬೇರೆ! ಅಮ್ಮನ ಮುಖದ ಕಳೆ ಆಗ ನೋಡಬೇಕು. ಭಕ್ತಿಯಿಂದ ಅವಳೂ ದೀನಳಾಗಿ, 'ಸಗುಣ ನಿರ್ಗುಣ ಏಕು ಗೋವಿಂದುರೇ ಎಕು ಗೋವಿಂದುರೇ...' ಎಂದು ಏನೂ ನಡೆಯದವಳಂತೆ ಭಜನೆಯಲ್ಲಿ ತಲ್ಲೀನಳಾಗಿ ಎಡಗೈಯನ್ನು ಗಾಳಿಯಲ್ಲಿ ತೇಲಿಸುತ್ತಾ ಬಲದ ಕೈಯಲ್ಲಿ ಹಾರ್ಮೋನಿಯಂ ರೀಡ್ಸಿನ ಮೇಲೆ ಅತೀವ ಉತ್ಸಾಹದಿಂದ ಕೈಯಾಡಿಸುತ್ತಿದ್ದಳು.